# ದಿನಾಂಕ:11.07.2022ರಂದು ಉಪ ಪೊಲೀಸ್ಆಯುಕ್ತರು ಸಂಚಾರ ಪೂರ್ವ ವಿಭಾಗ, ಬೆಂಗಳೂರು ನಗರರವರು ORRCA ಸದಸ್ಯರು ಮತ್ತು ಸಂಚಾರ ವಿಭಾಗದ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯ ನಡಾವಳಿ.

**ಅಧ್ಯಕ್ಷತೆ:**

ಶ್ರೀಮತಿ ಕಲಾ ಕೃಷ್ಣಸ್ವಾಮಿ, ಐ.ಪಿ.ಎಸ್
ಉಪ ಪೊಲೀಸ್ ಆಯುಕ್ತರು
ಸಂಚಾರ ಪೂರ್ವ ವಿಭಾಗ
ಬೆಂಗಳೂರು ನಗರ.

**ಉಪಸ್ಥಿತರು:**

**ಸಂಚಾರ ಪೂರ್ವ ವಿಭಾಗದ ಪೊಲೀಸ್ ಅಧಿಕಾರಿಗಳು**

1. ಶ್ರೀ ಬಿ ಶಿವಶಂಕರ್ ರೆಡ್ಡಿ, ಸಹಾಯಕ ಪೊಲೀಸ್ ಆಯುಕ್ತರು ಸಂಚಾರ ಆಗ್ನೇಯ ಉಪ ವಿಭಾಗ
2. ಶ್ರೀ ಹೆಚ್.ಜೆ. ತಿಪ್ಪೇಸ್ವಾಮಿ, ಸಹಾಯಕ ಪೊಲೀಸ್ ಆಯುಕ್ತರು ಸಂಚಾರ ವೈಟ್‌ಫೀಲ್ಡ್ ಉಪ ವಿಭಾಗ
3. ಶ್ರೀ ಅಶೋಕ್ ಕುಮಾರ್ ಪೊಲೀಸ್ ಇನ್ಸ್‌ಪೆಕ್ಟರ್ ಮಡಿವಾಳ ಸಂಚಾರ ಪೊಲೀಸ್ ಠಾಣೆ
4. ಶ್ರೀ ನವೀನ್ ಕುಮಾರ್ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಎಸ್.ಆರ್ ಲೇಔಟ್ ಸಂಚಾರ ಪೊಲೀಸ್ ಠಾಣೆ
5. ಶ್ರೀ ಕೃಷ್ಣಕುಮಾರ್ ಪೊಲೀಸ್ ಇನ್ಸ್‌ಪೆಕ್ಟರ್, ಹೆಚ್.ಎ.ಎಲ್ ಸಂಚಾರ ಪೊಲೀಸ್ ಠಾಣೆ
6. ಶ್ರೀ ಹರಿಯಪ್ಪ ಹೆಚ್. ಪೊಲೀಸ್ ಇನ್ಸ್‌ಪೆಕ್ಟರ್ ಕೆ.ಆರ್ ಪುರಂ ಸಂಚಾರ ಪೊಲೀಸ್ ಠಾಣೆ

**ORRCA ಸಂಘದ ಸದಸ್ಯರುಗಳು**

7. ಶ್ರೀ ಮೋಹನ್ ಕೆ.ಎಂ. ಎಂ.ಸಿ ಸದಸ್ಯರು **ORRCA**
8. ಶ್ರೀ ಜಲ್ಜಿತ್ ಸಿಂಗ್ ರಾಜ್‌ಕುಮಾರ್ ಉಪಾಧ್ಯಕ್ಷರು, ಗೋಲ್ಡನ್ ಸ್ಯಾಚ್ಸ್ ಸಂಸ್ಥೆ.
9. ಶ್ರೀ ಅಭಯ್ ಶೆಟ್ಟಿ, ವ್ಯವಸ್ಥಾಪಕರು ಸಾರ್ವಜನಿಕ ವ್ಯವಹಾರಗಳು ಇಂಟೆಲ್ ಸಂಸ್ಥೆ
10. ಶ್ರೀ ಮನೋಜ್‌ಕುಮಾರ್, ಸಾರಿಗೆ ಮುಖ್ಯಸ್ಥರು ವೆಲ್ಸ್ ಫಾರ್ಗೋ ಸಂಸ್ಥೆ.
11. ಶ್ರೀ ಜಾನ್, ಮುಖ್ಯಸ್ಥರು ಮೈಕ್ರೋಸಾಫ್ಟ್ ಸಾರಿಗೆ ಸಂಸ್ಥೆ.
12. ಶ್ರೀ ಪಿ. ಕುಲಕರ್ಣಿ ಸದಸ್ಯರು ORRCA
13. ಶ್ರೀ ಗಣೇಶ್, ಮುಖ್ಯಸ್ಥರು ಅಖಿಲ ರಾಜ್ಯ ಸಾರಿಗೆ ಸಂಸ್ಥೆ.

*****

ದಿನಾಂಕ:11.07.2022 ರಂದು ಮಧ್ಯಾಹ್ನ 03.00 ಗಂಟೆಗೆ ಮೇಲ್ಕಂಡ ಉಪಸ್ಥಿತರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು. ಸಭೆಯಲ್ಲಿ ಹೊರ ವರ್ತುಲ ರಸ್ತೆಯಲ್ಲಿ ಸುಗಮ ಸಂಚಾರ ಮತ್ತು ಸಂಚಾರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ORRCAಸದಸ್ಯರೊಂದಿಗೆ ಮತ್ತು ಸಂಚಾರ ವಿಭಾಗದ ಅಧಿಕಾರಿಗಳೊಂದಿಗೆ ಚರ್ಚಿಸಲಾಯಿತು.

1. ಶ್ರೀ ಅಭಯ್ ಶೆಟ್ಟಿ ರವರು ಮಾತನಾಡಿ ಹೊರವರ್ತುಲ ರಸ್ತೆಯ ಸರ್ವೀಸ್ ರಸ್ತೆಯ ಬದಿ ಪುಟ್ ಪಾತ್ ವ್ಯಾಪಾರಿಗಳು, ಆಟೋರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರುಗಳಿಂದ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿದ್ದು ಸಿಬ್ಬಂದಿಗಳ ನೇಮಕ ಮಾಡಿ ಸುಗಮ ಸಂಚಾರಕ್ಕೆ ತೊಂದರೆಯುಂಟಾಗದಂತೆ ತೆರವುಗೊಳಿಸಲು ಕೋರಿದರು.

2. ಶ್ರೀ ಜಿಲ್ಜಿತ್ ಸಿಂಗ್ ರಾಜ್ ಕುಮಾರ್ ರವರು ಮಾತನಾಡಿ ಹೊರ ವರ್ತುಲ ರಸ್ತೆಯ ಮಾರತ್ತಹಳ್ಳಿ ಸರ್ವಿಸ್ ರಸ್ತೆಯ ಕಲ್ಯಾಣಿ ಟೆಕ್ ಪಾರ್ಕ್‌ನಿಂದ ಮುಖ್ಯ ರಸ್ತೆಗೆ ಬರಲು ರಸ್ತೆ ವಿಭಜಕಗಳನ್ನು ತೆರವುಗೊಳಿಸಲು ತಿಳಿಸಿದರು.

3. ಮೆಟ್ರೋ ಕಾಮಗಾರಿ ಪ್ರಗತಿಯಲ್ಲಿರುವ ಕಾರಣ ಸುಗಮ ಸಂಚಾರಕ್ಕೆ ಆಡಚಣೆಯುಂಟಾಗುತ್ತಿದ್ದು, ಲೌರಿ ಜಂಕ್ಷನ್ ನಿಂದ ಸಿಲ್ಕ್ ಬೋರ್ಡ್ ಜಂಕ್ಷನ್ ವರೆಗೆ ಸೈಕಲ್ ಲೇನ್ ಅನ್ನು ತೆರವುಗೊಳಿಸುವುದು ಮತ್ತು ಹಾಲಿ ಇರುವ ಪುಟ್

ಪಾತ್ ವ್ಯಾಪಾರಿಗಳನ್ನು ತೆರವುಗೊಳಿಸಿ. ಸುಗಮ ಸಂಚಾರಕ್ಕೆ ಅನುವು ಮಾಡುವ ಅವಶ್ಯಕತೆ ಇರುತ್ತದೆ. ಎಂದು ತಿಳಿಸಿದರು.

4. ಶ್ರೀ ಮೋಹನ್ ಉಪಾಧ್ಯಕ್ಷರು ಗ್ಲೋಬಲ್ ಟೆಕ್ ಪಾರ್ಕ್ ಕಂಪನಿ ರವರು ಮಾತನಾಡಿ ಹೊರ ವರ್ತುಲ ರಸ್ತೆಯಲ್ಲಿ ಕೋಬ್ರಾ ಸಿಬ್ಬಂದಿಗಳು ಸುಗಮ ಸಂಚಾರಕ್ಕೆ ಆಡಚಣೆಯುಂಟುಮಾಡುವ ವಾಹನ ಸವಾರರಿಗೆ ಸೈರನ್ ಮುಖಾಂತರ ರಸ್ತೆ ಬಳಕೆಯ ಬಗ್ಗೆ ಹಾಗೂ ಸಂಚಾರ ನಿಯಮಗಳ ಕುರಿತು ಅರಿವು ಮೂಡಿಸಲು ಕೋರಿದರು.

5. ಶ್ರೀ ಅಭಯ್ ಶೆಟ್ಟಿ, ಉಪಾಧ್ಯಕ್ಷರುಇಂಟೆಲ್ ಕಂಪನಿ ರವರು ORRCA ವತಿಯಿಂದ ಸುಗಮ ಸಂಚಾರ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಮಾರ್ಷಲ್ ಗಳ ನೇಮಕ ಮಾಡಿದ್ದು, ಖಾಕಿ ಪ್ಯಾಂಟ್ ಮತ್ತು ಬಿಳಿ ಶರ್ಟ್ ಧರಿಸಿ ಕರ್ತವ್ಯ ನಿರ್ವಹಸಿಲು ಅವಕಾಶ ಮಾಡಿಕೊಡುವಂತೆ ಕೋರಿದರು.

6. ORRCA ಮಾರ್ಷಲ್ ಸಿಬ್ಬಂದಿಗಳು ಸುಗಮ ಸಂಚಾರಕ್ಕೆ ಸಂಬಂಧಪಟ್ಟಂತೆ ಸಾರ್ವಜನಿಕರೊಂದಿಗೆ ಜಗಳವಾಡುತ್ತಿದ್ದು, ಸಂಚಾರ ಪೊಲೀಸರಜೊತೆಯಲ್ಲಿ ಸಮನ್ವಯತೆಯಿಂದಕರ್ತವ್ಯ ನಿರ್ವಹಿಸುವುದು ಹಾಗೂ ಮಾರ್ಷಲ್ ರವರುಗಳಿಗೆ ಸಂಚಾರತರಬೇತಿ ನೀಡಲು ಕೋರಿದರು.

7. ಹೊರವರ್ತುಲ ರಸ್ತೆಯದೇವರಬೀಸನಹಳ್ಳಿ ಇಕೋ ಸ್ಪೇಸ್ ಮುಂಭಾಗ ಪಾದಚಾರಿಗಳು ರಸ್ತೆದಾಟಲು ಸಮಸ್ಯೆಯುಂಟಾಗುತ್ತಿದ್ದು ಸ್ಕೈ ವಾಕ್ ನಿರ್ಮಾಣ ಮಾಡುವ ಅವಶ್ಯಕತೆ ಇರುತ್ತದೆ.

8. ಹೊರ ವರ್ತುಲ ರಸ್ತೆಯರಸ್ತೆ ಬಳಕೆದಾರರಿಗೆ/ ವಾಹನ ಸವಾರರಿಗೆ ಹಾಗೂ ಎಲ್ಲಾಕಂಪನಿಯ ಉದ್ಯೋಗಿಗಳಿಗೆ ಸಂಚಾರ ನಿಯಮಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕೋರಿದರು.

9. ಮುಂದಿನ ದಿನಗಳಲ್ಲಿ ಹೊರ ವರ್ತುಲ ರಸ್ತೆಗೆ ಸಂಬಂಧಿಸಿದಂತೆ ಸಭೆ ನಡೆದಾಗ ಬಿ.ಎಂ.ಆರ್.ಸಿ.ಎಲ್, ಬಿ.ಬಿ.ಎಂ.ಪಿ, ಬೆಸ್ಕಾಂ ಮತ್ತು ಬಿ.ಡ್ಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಸಮಸ್ಯೆಗಳ ಬಗ್ಗೆ ಚರ್ಚಿಸಲುಕೋರಲಾಯಿತು.

10. ಶ್ರೀ ಮನೋಜ್‌ಕುಮಾರ್‌ರವರು ಮಾತನಾಡಿ ಈ ಹಿಂದೆ ಬಸ್ ಶೆಟಲ್ ಕಂಪನಿ ಉದ್ಯೋಗಿಗಳನ್ನು ಕರೆದುಕೊಂಡು ಬರುವಾಗ ಕೇವಲ ಒಂದುಗಂಟೆಯ ಸಮಯ ತೆಗೆದುಕೊಳ್ಳತ್ತಿದ್ದು, ವಾಪಾಸು ಕರೆದುಕೊಂಡು ಹೋಗುವಾಗ 2–30 ಗಂಟೆಯ ಸಮಯ ತೆಗೆದುಕೊಳ್ಳುತ್ತಿರುವುದಾಗಿ ತಿಳಿಸಿದ್ದು, ಇದರಿಂದ ಕಂಪನಿಗಳ ಬಸ್ಸುಗಳನ್ನು ಬಳಸಲು ಆಸಕ್ತಿ ವಹಿಸುತ್ತಿಲ್ಲ. ಆದುದರಿಂದಎಲ್ಲಾ ಸಂಚಾರ ಪೊಲೀಸ್‌ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್‌ರವರುಗಳು ಪೀಕ್‌ಅವರ್ಸ್ ಸಮಯದಲ್ಲಿಖುದ್ದಾಗಿ ಹೊರವರ್ತುಲ ರಸ್ತೆಯಲ್ಲಿ ಹಾಜರಿದ್ದು, ಸಂಚಾರ ನಿರ್ವಹಣೆಯಕಡೆಗೆ ಹೆಚ್ಚಿನಆದ್ಯತೆ ನೀಡುವಂತೆಕೋರಿದರು.

11. ಶ್ರೀ ಬಿ. ಕುಲಕರ್ಣಿ, ಆಡಳಿತ ಅಧಿಕಾರಿಆರ್ಕಾರವರು ಮಾತನಾಡಿ ಬಿ.ಎಂ.ಆರ್.ಸಿ.ಎಲ್, ಬಿ.ಡಬ್ಲೂ.ಎಸ್.ಎಸ್.ಬಿ ಹಾಗೂ ಬೆಸ್ಕಾಂ ಕಾಮಗಾರಿಗಳನ್ನು ನಿಗದಿಪಡಿಸಿರುವ ಅವಧಿಯಲ್ಲಿಯೇ ಪೂರ್ಣಗೊಳಿಸುವಂತೆ ಸೂಚಿಸುವಂತೆಹಾಗೂ ಗುಂಡಿಗಳನ್ನು ಶೀಘ್ರವಾಗಿ ಮುಚ್ಚಿ ಸರಿಪಡಿಸಲುಕೋರಿರುತ್ತಾರೆ.

**ಸಭೆಯಲ್ಲಿ ಹಾಜರಿದ್ದ ಸಂಚಾರ ವಿಭಾಗದಪೊಲೀಸ್‌ಅಧಿಕಾರಿಗಳು ನೀಡಿದ ಪ್ರಮುಖ ಸಲಹೆಗಳು.**

1. ಹೊರವರ್ತುಲ ರಸ್ತೆಯ ಕಂಪನಿಗಳ ಕೆಲಸದ ಪ್ರಾರಂಭದ ಸಮಯ ಮತ್ತು ಮುಕ್ತಾಯದ ಸಮಯವನ್ನು ಹಂತ ಹಂತವಾಗಿ ನಿರ್ವಹಿಸಲು ಸೂಚಿಸಲಾಯಿತು.

2. ಹೊರ ವರ್ತುಲ ರಸ್ತೆಯ ಕಂಪನಿಯ ಉದ್ಯೋಗಿಗಳನ್ನು ಹತ್ತಿಸಿಕೊಳ್ಳುವಾಗ ಮತ್ತು ಇಳಿಸುವಾಗ ವಾಹನಗಳನ್ನು ಯಾವುದೇ ಕಾರಣಕ್ಕೂ ರಸ್ತೆ ಬದಿ ನಿಲ್ಲಿಸದಂತೆ ಸೂಚಿಸಲಾಯಿತು.

3. ಹೊರ ವರ್ತುಲ ರಸ್ತೆಯಲ್ಲಿ ಕಂಪನಿಗಳ ಕಡೆಯಿಂದ ಪ್ರಮುಖ ಸ್ಥಳಗಳಲ್ಲಿ ಸಿ.ಸಿ ಕ್ಯಾಮೆರಾಗಳನ್ನು ಅಳವಡಿಸುವುದು. ಈ ಬಗ್ಗೆ ಸಂಬಂಧಪಟ್ಟ ಸಂಚಾರ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್‌ರವರುಗಳು ಸಿ.ಸಿ. ಕ್ಯಾಮೆರಾ ಅಳವಡಿಸುವ ಸ್ಥಳಗಳ ಮಾಹಿತಿ ನೀಡುವಂತೆ ಸೂಚಿಸಿರುತ್ತೆ.

4. ಹೊರ ವರ್ತುಲ ರಸ್ತೆಯ ಕಂಪನಿಯ ಉದ್ಯೋಗಿಗಳು ಹೆಚ್ಚಿನ ರೀತಿಯಲ್ಲಿ ಸಮೂಹ ಸಾರಿಗೆ ವ್ಯವಸ್ಥೆ ಅಳವಡಿಸಿಕೊಳ್ಳಲು ಒತ್ತು ನೀಡುವಂತೆ ಸೂಚಿಸಲಾಯಿತು.

5. ಹೊರ ವರ್ತುಲ ರಸ್ತೆಯ ಕಂಪನಿಯ ವಾಹನಗಳನ್ನು ಕಂಪನಿಯ ಆವರಣ ದಲ್ಲಿ ಅಥವಾ ಕಂಪನಿಗೆ ಸಂಬಂಧಪಟ್ಟ ಸ್ಥಳಗಳಲ್ಲಿಯೇ ನಿಲುಗಡೆ ಮಾಡುವಂತೆ ಹಾಗೂ ಯಾವ್ಯದೇ ಕಾರಣದಿಂದ ರಸ್ತೆಯಲ್ಲಿ ನಿಲುಗಡೆ ಮಾಡದಂತೆ ಸೂಚಿಸಲಾಯಿತು.

6. ಈಗಾಗಲೇ ಕಂಪನಿಗಳಿಂದ ನಿಯೋಜಿಸಲಾಗುತ್ತಿರುವ ಮಾರ್ಷಲ್‌ಗಳ ಸಂಖ್ಯೆಯನ್ನು ಹೆಚ್ಚಿಸಿ ವಾಹನಗಳ ಸುಗಮ ಸಂಚಾರಕ್ಕೆ ಸಂಚಾರ ಪೊಲೀಸರೊಂದಿಗೆ ಸಹಕರಿಸುವಂತೆ ಸೂಚಿಸಲಾಯಿತು.

ಈ ಮೇಲ್ಕಂಡ ವಿಷಯಗಳ ಬಗ್ಗೆ ಮುಂದಿನ ದಿನಗಳಲ್ಲಿ ಕ್ರಮ ಕೈಗೊಂಡು ವಾಹನಗಳ ಸುಗಮ ಸಂಚಾರ ವ್ಯವಸ್ಥೆಯನ್ನು ಕಲ್ಪಿಸಲು ಎಲ್ಲರೂ ಕೈ ಜೋಡಿಸುವಂತೆ ಹಾಗೂ ಸಂಚಾರ ಪೊಲೀಸ್ ಅಧಿಕಾರಿರವರುಗಳಿಗೆ ಸಂಚಾರ ನಿರ್ವಹಣೆಯ ಕಡೆಗೆ ಹೆಚ್ಚಿನ ಆದ್ಯತೆಯನ್ನು ನೀಡುವಂತೆ ಸೂಚಿಸಿ ಸಭೆಯನ್ನು ಮುಕ್ತಾಯ ಮಾಡಲಾಯಿತು.

ಉಪ ಪೊಲೀಸ್ ಆಯುಕ್ತರು,
ಸಂಚಾರ ಪೂರ್ವ ವಿಭಾಗ,
ಬೆಂಗಳೂರು ನಗರ.

ರವರಿಗೆ:
ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.